ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 11 ಇಎಸ್‌ಟಿ (3) 2017 / 518

ನಿರ್ದೇಶಕರವರ ಕಚೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 01-06-2017.

**-ಸುತ್ತೋಲೆ-**

**ವಿಷಯ:** ಕರ್ನಾಟಕ ರಾಜ್ಯ ಸರ್ಕಾರಿ/ಅನುಧಾನಿತ ಪ್ರೌಢಶಾಲ ಶಿಕ್ಷಕರಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ನೀಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 78 ಎಸ್‌ಎಲ್‌ಬಿ 2016, ದಿನಾಂಕ: 15.04.2016.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 78 ಎಸ್‌ಎಲ್‌ಬಿ 2016, ದಿನಾಂಕ: 03.03.2017.
3. ಪ್ರಾಂಶುಪಾಲರು, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಹುಬ್ಬಳ್ಳಿ. ಇವರ ಪತ್ರ ಸಂಖ್ಯೆ: ಜೆಟಿಎಸ್‌ಹೆಚ್/ಇಎಸ್‌ಟಿ/207-18/01/04, ದಿನಾಂಕ: 04.04.2017.

****

ರಾಜ್ಯದ ಸರ್ಕಾರಿ ಮತ್ತು ಅನುಧಾನಿತ ಪ್ರೌಢಶಾಲೆಗಳಲ್ಲಿ ಹಾಗೂ ಸಂಯುಕ್ತ ಪದವಿ ಪೂರ್ವ ಕಾಲೇಜಿನ (ಪ್ರೌಢಶಾಲಾ) ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪ ಪ್ರಾಂಶುಪಾಲರು, ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವೃತ್ತಿ ಶಿಕ್ಷಕರುಗಳಿಗೆ ಹಾಗೂ ಮುಖ್ಯ ಶಿಕ್ಷಕರು/ತತ್ಸಮಾನ ಹಾಗೂ ವಿಷಯ ಶಿಕ್ಷಕರು/ತತ್ಸಮಾನ ಹುದ್ದೆಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯವನ್ನು ದಿನಾಂಕ: 01-06-2016 ರಿಂದ ಜಾರಿಗೆ ಬರುವಂತೆ ಸರ್ಕಾರವು ಉಲ್ಲೇಖ (2)ರಲ್ಲಿ ಮಂಜೂರು ಮಾಡಿ ಆದೇಶಿಸಿರುತ್ತದೆ.

ಉಲ್ಲೇಖ (3)ರ ಪ್ರಾಂಶುಪಾಲರು, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಹುಬ್ಬಳ್ಳಿ. ಇವರ ಪತ್ರದಲಿ ರಾಜ್ಯದಲ್ಲಿ ಆರು (6) ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು ಇದ್ದು, ಸದರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತತ್ಸಮಾನ/ವೃತ್ತಿಪರ ಶಿಕ್ಷಕರು ಸರ್ಕಾರದ ಆದೇಶ ಸಂಖ್ಯೆ; ಇಡಿ/78/ಎಸ್‌ಎಲ್‌ಬಿ/2016, ದಿನಾಂಕ: 15-04-2016 ರಂತೆ, ಒಂದು ಹೆಚ್ಚುವರಿ ವೇತನ ಬಡ್ತಿ ಹಾಗೂ ರೂ:- 400/- ರ ವಿಶೇಷ ಭತ್ಯಯಿಂದ ವಂಚಿತರಾಗಿದ್ದು, ಈ ಸಂಸ್ಥೆಗಳಲ್ಲಿ ಸದರಿ ಶಿಕ್ಷಕರಿಗೆ ಯಾವುದೇ ರೀತಿಯ ಬಡ್ತಿ ಹಾಗೂ ವಿಶೇಷ ವೇತನಗಳಿರುವುದಿಲ್ಲ. ಆದ್ದರಿಂದ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು ಸಹ ರಾಜ್ಯದಲ್ಲಿ ವೃತ್ತಿಪರ ಶಿಕ್ಷಣ (ತಾಂತ್ರಿಕ) ನೀಡುತ್ತಿದ್ದು, ಅಲ್ಲದೆ ಪ್ರೌಢಶಾಲೆಗಳಂತೆ ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ ಸದರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ನೌಕರರಿಗೂ ಸಹ ಈ ವಿಶೇಷ ಭತ್ಯೆ ಹಾಗೂ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಬಿಡುಗಡೆ/ಮಂಜೂರು ಮಾಡುವಂತೆ ಕೋರಿರುವುದು ಸರಿಯಷ್ಟೆ.

ಸದರಿ ಪ್ರಾಂಶುಪಾಲರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಕೆಳಕಂಡ ಮಾಹಿತಿಯನ್ನು ಒದಗಿಸುವಂತೆ ಸೂಚಿಸಲಾಗಿದೆ.

1. ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ದಿನಾಂಕ: 01-08-2008ರ ಪೂರ್ವದಲ್ಲಿ ಸರ್ಕಾರಿ/ಅನುದಾನಿತ ಪ್ರೌಢಶಾಲೆಯಲ್ಲಿ ನೇಮಕಾತಿಗೊಂಡು ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ನೀಡಲಾಗುತ್ತಿರುವ ರೂ 400/- ಗಳ ವಿಶೇಷ ಭತ್ಯೆಯನ್ನು ಮುಂದುವರಿಸಲಾಗಿದೆ ಎಂದು ಆದೇಶಿಸಲಾಗಿದೆ. ದಿನಾಂಕ: 01--08-2008ರ ಪೂರ್ವದಲ್ಲಿ ತಮ್ಮ ಸಂಸ್ಥೆಗಳಲ್ಲಿ ನೇಮಕಗೊಂಡ ಶಿಕ್ಷಕರುಗಳಿಗೆ ಈ ವಿಶೇಷ ಭತ್ಯೆಯನ್ನು ನೀಡಲಾಗಿದೆಯೇ? ಎಂಬುದರ ಬಗ್ಗೆ ಹಾಗೂ 01-08-2008ರ ಪೂರ್ವದಿಂದ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿಯನ್ನು ನೀಡಲು ತಿಳಿಸಲಾಗಿದೆ.
2. ತಮ್ಮ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳು ವೇತನ ಶ್ರೇಣಿಯ ಅಂತಿಮ ಹಂತವನ್ನು ತಲುಪಿದಲ್ಲಿ ಅಂತಹ ಶಿಕ್ಷಕರು ಸದರಿ ಸರ್ಕಾರದ ಆದೇಶದನ್ವಯ ರೂ 400/- ರ ವಿಶೇಷ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆಯೇ? ಎಂಬುದರ ಬಗ್ಗೆ ವಿವರವಾಗಿ ಮಾಹಿತಿಯನ್ನು ಒದಗಿಸಲು ತಿಳಿಸಿದೆ.

......2

ಕೋರಿರುವ ಮಾಹಿತಿಯನ್ನು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಗೆ ಸಂಬಂಧಪಟ್ಟ ಪ್ರಾಂಶುಪಾಲರುಗಳು ಕೂಲಂಕಷವಾಗಿ ಪರಿಶೀಲಿಸಿ ಜರೂರಾಗಿ ಮಾಹಿತಿಯನ್ನು ಒದಗಿಸಲು ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

ಕಡತವು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ,

1/6/17

**ನಿರ್ದೇಶಕರು**

**ಇವರಿಗೆ,**

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿ,**

1. ಸಂಬಂಧಪಟ್ಟ ಸಂಸ್ಥೆಗಳ ಸಿಬ್ಬಂದಿಗಳಿಗೆ (ಪ್ರಾಂಶುಪಾಲರ ಮುಖಾಂತರ)
2. ತಾಂತ್ರಿಕ ಶಿಕ್ಷಣ ನಿರ್ದೇಶನಾಲದ ಇ–ಆಡಳಿತ ವಿಭಾಗಕ್ಕೆ ನಿರ್ದೇಶನಾಲಯದ ವೆಬ್‌ಸೈಟಿನಲ್ಲಿ ಪ್ರಚುರ ಪಡಿಸಲು ತುರ್ತು ಕ್ರಮ ಜರುಗಿಸಲು ಕೋರಲಾಗಿದೆ.